**ದಿನಾಂಕಃ 23/05/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ಅಮಾನತ್ತು ಪಡಿಸಿಕೊಂಡ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 2 ಟೆಟ್ರಾ ಪ್ಯಾಕೇಟುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು, 8 ಪಿಎಂ ವಿಸ್ಕಿಯ ಒಂದು ಟೆಟ್ರಾ ಪ್ಯಾಕೇಟನ್ನು ಮು.ಮಾ.3 ಎಂದು ಮತ್ತು ರೂ.100/- ಮುಖಬೆಲೆಯ 13 ನೋಟುಗಳನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಆರ್ ವಿ ವಕೀಲರಿಂದಃ**

ಬೀಟ್ ಪುಸ್ತಕವನ್ನು ನಿರ್ವಹಿಸುವ ಬಗ್ಗೆ ನಮಗೆ ಕಡ್ಡಾಯವಿರುವುದಿಲ್ಲ. ಬಾತ್ಮಿದಾರರು ಚಪ್ಪರದಹಳ್ಳಿಯ ಬಾರ್ ನಿಂದ ಬೈಕಿನಲ್ಲಿ ರಟ್ಟಿನ ಬಾಕ್ಸಿನಲ್ಲಿ ಮಧ್ಯವನ್ನು ಅಕ್ರಮವಾಗಿ ತರುತ್ತಿದ್ದಾರೆಂದು ತಿಳಿಸಿದ್ದರು. ಬಾತ್ಮಿದಾರರು ನಿಖರವಾಗಿ ಬಾರಿನ ಹೆಸರನ್ನು ತಿಳಿಸಿರಲಿಲ್ಲ. ನಾನು ಹೇಳಿದ ಸಮಯ ಮಬ್ಬುಗತ್ತಲೆಯಾಗಿತ್ತು. ನಾನು ಹೇಳಿದಂತಹ ರಸ್ತೆ 24 ತಾಸು ವಾಹನಗಳ ಚಲಾವಣೆ ಇರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಅಕ್ಕಪಕ್ಕ ಮನೆಗಳು ಇದ್ದವು ಎಂದರೆ ಸರಿಯಲ್ಲ. ಆದರೆ ಅಲ್ಲಿಂದ ಸ್ವಲ್ಪ ದೂರದಲ್ಲಿ ಮನೆಗಳು ಇದ್ದವು. ಪಂಚರು ಘಟನಾ ಸ್ಥಳದ ಸ್ಥಳೀಕರಲ್ಲ. ಅವರು ಬೆಟ್ಟದಪುರ ಟೌನಿನವರು ಎಂದರೆ ನಾವು ಹೋಗುತ್ತಿದ್ದ ಮಾರ್ಗದಲ್ಲಿ ಅವರು ದೊರಕಿದರು ಎಂದು ನುಡಿಯುತ್ತಾರೆ. ಘಟನಾ ಪೂರ್ವದಲ್ಲಿ ಘಟನಾ ಸ್ಥಳದ ಬಗ್ಗೆ ಪರಿಚಯ ಇತ್ತು. ಮಹಜರ್ ಮುಗಿಸಿ ಠಾಣೆಗೆ ಬಂದ ನಂತರ ನನ್ನ ವರದಿಯನ್ನು ತಯಾರಿಸಿ, ಸಲ್ಲಿಸಿರುತ್ತೇನೆ. ರಟ್ಟಿನ ಬಾಕ್ಸ್ ನ್ಯಾಯಾಲಯದ ಮುಂದೆ ಇಲ್ಲ. ನಾವು ಮಾಹಿತಿಯಂತೆ ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ, ಆರೋಪಿತನನ್ನು ದ್ವಿಚಕ್ರವಾಹನದೊಂದಿಗೆ ದಸ್ತಗಿರಿ ಮಾಡಿ, ಯಾವುದೇ ಮಾಲನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರನ್ನು ಠಾಣೆಯಲ್ಲೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮುದ್ದೇಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ

ಎಂದರೆ ಸರಿಯಲ್ಲ. ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**